2018 ಕ.ತೀ.ವ. 669

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಸುಭ್ರೋ ಕಮಲ್ ಮುಖರ್ಜಿ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

## ಮೆ|| ದೀಪ್‌ಚಂದ್ ಕಿಶನ್‌ಲಾಲ್ –ವಿರುದ್ಧ– ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ.

ಅರ್ಜಿದಾರರು ಕಾನೂನುಬಾಹಿರವಾಗಿ ಕಬ್ಬಿಣದ ಅದಿರು ಖನಿಜವನ್ನು ಹೊರತೆಗೆದಿದ್ದಾರೆಂದು ಆವರಣದ ಮೇಲೆ 215.75 ಕೋಟಿ ರೂ.ಗಳ ಮೊತ್ತವನ್ನು ಸಂದಾಯ ಮಾಡಲು ಅರ್ಜಿದಾರರಿಗೆ ಆದೇಶಿಸಿ, ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆ ಇವರು ಹೊರಡಿಸಿದ ದಿನಾಂಕ 2ನೇ ನವೆಂಬರ್ 2016ರ ಆದೇಶವನ್ನು ರದ್ದುಗೊಳಿಸಲು ಕೋರಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

ಗಣಿ ಮತ್ತು ಭೂ ವಿಜ್ಞಾನಗಳ ಪ್ರಶ್ನಿತ ಆದೇಶವು ಸಮನ್ಯಾಯ ಸ್ವರೂಪದ್ದಾಗಿದೆ.

ಒಂದೆಡೆ ಭಾರತ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳಗನುಗುಣವಾಗಿ, ರಾಜ್ಯ ಸರ್ಕಾರವು ಅರ್ಜಿದಾರರ ಗುತ್ತಿಗೆಯನ್ನು ಒಳಗೊಂಡು 51 ಗುತ್ತಿಗೆಗಳನ್ನು ರದ್ದುಗೊಳಿಸಿದೆ

* ರಿಟ್ ಅರ್ಜಿ ಸಂ.7335/2017 (ಜಿ.ಎಂ.–ಎಂ.ಎಂ–ಎಸ್), ದಿನಾಂಕ: 23ನೇ ಆಗಸ್ಟ್, 2017.

ಎಂದು ಅದು ಹೇಳಿದೆ. ಗುತ್ತಿಗೆಯು 12ನೇ ಸೆಪ್ಟೆಂಬರ್, 2013ರಂದು ಜಾರಿಯಲ್ಲಿತ್ತು ಮತ್ತು ಆ ದಿನಾಂಕದಂದು ಪ್ರತ್ಯರ್ಜಿದಾರರು ಗುತ್ತಿಗೆಯನ್ನು ರದ್ದುಗೊಳಿಸಿರುವರು ಎಂಬ ಪ್ರತ್ಯರ್ಜಿದಾರರ ತಿಳುವಳಿಕೆಯು ಸಂದೇಹಕ್ಕೆಡೆ ಮಾಡದಂತಿತ್ತು ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ. ಇನ್ನೊಂದು ಕಡೆ ಅದು, ಗುತ್ತಿಗೆ ಪತ್ರದಲ್ಲಿ ಲಿಪಿಕ ತಪ್ಪು ಉಂಟಾಗಿತ್ತೆಂದು ಮತ್ತು ಅದರಲ್ಲಿ ಹೇಳಲಾದ ಪ್ರಾರಂಭ ದಿನಾಂಕವನ್ನು 5ನೇ ಜುಲೈ 1974ರ ಬದಲಾಗಿ 27ನೇ ಏಪ್ರಿಲ್ 2002 ಎಂಬುದಾಗಿ ಪ್ರಮಾದವಶಾತ್ ತೋರಿಸಲಾಗಿತ್ತೆಂದು ಹೇಳುತ್ತದೆ. ಇದನ್ನು ಒಪ್ಪಿಕೊಂಡಲ್ಲಿ, ಆಗ, ಗುತ್ತಿಗೆಯು ಅಕ್ರಮವಾಗಿ ಗಣಿಗಾರಿಕೆ ನಡೆಸಲಾಗುತ್ತಿದೆ ಎಂದು ಆರೋಪಿಸಲಾದ ಕಾಲಾವಧಿಯಾದ 2003ರ, 2008ರ ಕಾಲಾವಧಿಯಲ್ಲಿ ಅಸ್ತಿತ್ವದಲ್ಲೇ ಇರಲಿಲ್ಲ. ಆದರೆ, ಪ್ರಶ್ನಿತ ಆದೇಶದಲ್ಲಿನ ಪ್ರಸ್ತಾವನೆಯು, ಅರ್ಜಿದಾರರ ಗುತ್ತಿಗೆಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳಿಗೆ ಅನುಸಾರವಾಗಿ ರದ್ದುಗೊಳಿಸಲಾಗಿತ್ತು ಎಂಬ ತದ್ವಿರುದ್ಧವಾದ ಒಕ್ಕಣೆಯನ್ನು ಒಳಗೊಂಡಿದೆ. ಈ ಎರಡೂ ನಿಲುವುಗಳು ಒಂದಕ್ಕೊಂದು ತದ್ವಿರುದ್ಧವಾಗಿವೆ ಮತ್ತು ಪರಸ್ಪರ ವಿರೋಧಾಭಾಸದಿಂದ ಕೂಡಿವೆಯಾದ್ದರಿಂದ ಒಟ್ಟಿಗೆ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಪ್ರತ್ಯರ್ಜಿದಾರರ ನಿಲುವು ಸಂಪೂರ್ಣವಾಗಿ ಗ್ರಾಹ್ಯವಲ್ಲದ ನಿಲುವಾಗಿದೆ ಎಂದು ಹೇಳಲು ಇದು ಪರ್ಯಾಪ್ತವಾಗಿದೆ.

ನಿಸ್ಸಂಶಯವಾಗಿ, ಪ್ರಶ್ನಿತ ಆದೇಶವು, ಲೋಕಾಯುಕ್ತವು ಮಾಡಿದ ಶಿಫಾರಸ್ಸುಗಳಿಂದ ಹೊರಗುಳಿಯುತ್ತದೆ. 2013ರ ಐ.ಎ.ಸಂಖ್ಯೆ 185ರಲ್ಲಿ, ಅರ್ಜಿದಾರರು ರಿಟ್ ಅರ್ಜಿ ಸಂಖ್ಯೆ 512/2013ರಲ್ಲಿನ ದಿನಾಂಕ 18ನೇ ಡಿಸೆಂಬರ್ 2008 ಮತ್ತು 27ನೇ ಜುಲೈ 2011ರ ಲೋಕಾಯುಕ್ತದ ಎರಡು ವರದಿಗಳಲ್ಲಿ ಇರುವ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವುದಕ್ಕೆ ಕೋರಿದ್ದರು. ಸದರಿ ಅರ್ಜಿಯನ್ನು ಪುರಸ್ಕರಿಸಿರಲಿಲ್ಲ. ಆದರೆ ಪರಿಷ್ಕೃತ

ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಪರಿಷ್ಕೃತ ಅರ್ಜಿಯನ್ನು ಸಲ್ಲಿಸಲಾಗಿತ್ತು ಮತ್ತು ಅದು 29ನೇ ಜುಲೈ 2015ರ ಆದೇಶದ ಮೂಲಕ ವಜಾಗೊಂಡಿತ್ತು. ಯಾರು ಗುತ್ತಿಗೆದಾರರಾಗಿದ್ದರೋ ಮತ್ತು ಯಾರ ಗುತ್ತಿಗೆಗಳನ್ನು ಗುತ್ತಿಗೆ ಅವಧಿವರೆಗೆ ಅವರು ಹೊರತೆಗೆದ ಕಬ್ಬಿಣದ ಅದಿರಿನ ಮಾರುಕಟ್ಟೆ ಮೌಲ್ಯ ಸಹಿತವಾಗಿ ರದ್ದುಗೊಳಿಸಲಾಯಿತೋ, ಆ ವ್ಯಕ್ತಿಗಳನ್ನು ಜವಾಬ್ದಾರರನ್ನಾಗಿಸುವುದು ಅಗತ್ಯವೆಂದು ಭಾರತದ ಸರ್ವೋಚ್ಚ ನ್ಯಾಯಾಲಯವು ಭಾವಿಸದೇ ಇದ್ದಾಗ, ನಿಶ್ಚಯವಾಗಿಯೂ ಗಣಿ ಮತ್ತು ಭೂ ವಿಜ್ಞಾನಗಳ ನಿರ್ದೇಶಕರಿಗೆ ಹಾಗೆ ಮಾಡಲು ಅನುಮತಿ ಇರಲಿಲ್ಲ.

ಆದುದರಿಂದ, ಲೋಕಾಯುಕ್ತವು ಯಾರೇ ಖಾಸಗಿ ವ್ಯಕ್ತಿಯ ವಿರುದ್ಧ ಯಾವುದೇ ಅಧಿಕಾರ ವ್ಯಾಪ್ತಿ ಹೊಂದಿರದೇ ಇರುವುದರಿಂದ ಹಾಗೂ ಲೋಕಾಯುಕ್ತವು ನಿರ್ಧರಿಸಿದ ಮೌಲ್ಯಕ್ಕೆ ಅರ್ಜಿದಾರರನ್ನು ಜವಾಬ್ದಾರರನ್ನಾಗಿಸಲು ಮಾಡಿದ ಮನವಿಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ತಿರಸ್ಕರಿಸಿರುವುದರಿಂದ, ಕ್ಲೇಮು ಮಾಡಲಾದ ಮೊತ್ತಕ್ಕೆ ಲೋಕಾಯುಕ್ತದ ವರದಿಯು ಆಧಾರವಾಗಲು ಸಾಧ್ಯವಿಲ್ಲ. ನ್ಯಾಯಯುತವಾದ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಮತ್ತು ವ್ಯವಹರಿಸುವುದು ಸರ್ಕಾರದ ಕರ್ತವ್ಯವಾಗಿದೆ. ರಾಜ್ಯ ಸರ್ಕಾರವು, ಭಾರತ ಸರ್ವೋಚ್ಚ ನ್ಯಾಯಾಲಯದ ಮುಂದೆ ಪಕ್ಷಕಾರನಾಗಿದೆ. ಆದುದರಿಂದ, ಯಾವುದೇ ಹೆಸರಿನಿಂದ ಕರೆಯಲಿ ಯಾವುದೇ ಮೊತ್ತವನ್ನು ಸಂಗ್ರಹಿಸಲು ಲೋಕಾಯುಕ್ತವು ಸಲ್ಲಿಸಿದ ವರದಿಯನ್ನಾಶ್ರಯಿಸುವುದರಿಂದ ಅವರು ವಿಬಂಧಿತರಾಗಿರತಕ್ಕದ್ದು. ಮೇಲೆ ಉಲ್ಲೇಖಿಸಿದ ನೋಟೀಸನ್ನು ಹೊರಡಿಸುವ ಮುಂಚೆ ಅದರ ಸಾಧಕ-ಬಾಧಕಗಳನ್ನು ಕುರಿತು ಆಲೋಚಿಸುವ ಕರ್ತವ್ಯವನ್ನು ಸರ್ಕಾರಿ ಆಡಳಿತ ಯಂತ್ರವು ಹೊಂದಿದೆ. ವ್ಯಕ್ತಿಗಳಿಗಾಗುವ ಕಿರುಕುಳವನ್ನು ತಪ್ಪಿಸಲು ರಾಜ್ಯ ಆಡಳಿತ ಯಂತ್ರವು ಸೂಕ್ತವಾಗಿ ಕಾರ್ಯನಿರ್ವಹಿಸಬೇಕು.

ಯಾವುದೇ ದೃಷ್ಟಿಯಿಂದ ನೋಡಿದರೂ, ಪ್ರಶ್ನಿತ ಆದೇಶವು, ಐ.ಎ. ಸಂಖ್ಯೆ 140, ಐ.ಎ. ಸಂಖ್ಯೆ 2009ರ 562ರಲ್ಲಿನ ಪರಿಷ್ಕೃತ ಅರ್ಜಿಯಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಆದೇಶದಲ್ಲಿ ಅಂಥ ಕ್ಲೇಮುಗಳನ್ನು ಅದು ತಿರಸ್ಕರಿಸಿದೆ ಎಂಬ ಅಂಶವನ್ನು ವಿಶೇಷವಾಗಿ ಗಮನಕ್ಕೆ ತೆಗೆದುಕೊಂಡಲ್ಲ, ಸಮರ್ಥನೀಯವಾಗಿರುವುದಿಲ್ಲ.

ಮೇಲಿನ ನಮ್ಮ ಚರ್ಚೆಗಳ ಹಿನ್ನೆಲೆಯಲ್ಲಿ, ರಿಟ್ ಅರ್ಜಿಯನ್ನು ಅಂಗೀಕರಿಸುವ ಮೂಲಕ ರಿಟ್ ಅರ್ಜಿಯೊಂದಿಗೆ ಅನುಬಂಧ'-ಟಿ ಆಗಿ ಲಗತ್ತಿಸಿದ ಪ್ರತ್ಯರ್ಜಿದಾರ 2 ಇವರು ಹೊರಡಿಸಿದ ದಿನಾಂಕ 2ನೇ ನವೆಂಬರ್, 2016ರ ಮತ್ತು 28ನೇ ನವೆಂಬರ್ 2016ರ ಆದೇಶಗಳನ್ನು ರದ್ದುಗೊಳಿಸಿದ್ದೇವೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. ಐಎಲ್ಆರ್ 2009 ಕೆಎಆರ್ 1940<br>ಎಂ.ಎ. ಪಾರ್ಥಸಾರಥಿ -ವಿರುದ್ಧ-<br>ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ<br>ಮತ್ತು ಇತರರು* | *(ಉಲ್ಲೇ) 18* |
| *2. 1987(2) ಎಸ್‌ಸಿಸಿ 160<br>ಕರ್ನಾಟಕ ರಾಜ್ಯ -ವಿರುದ್ಧ-<br>ಶ್ರೀ ರಾಮೇಶ್ವರ ರೈಸ್ ಮಿಲ್ಸ್, ತೀರ್ಥಹಳ್ಳಿ* | *(ಉಲ್ಲೇ) 28* |
| *3. 1986(2) ಕೆಎಲ್‌ಜೆ 143<br>ಜಯಣ್ಣ ಮತ್ತು ಸಹೋದರರು -ವಿರುದ್ಧ-<br>ಕರ್ನಾಟಕ ರಾಜ್ಯ ಮತ್ತು ಇತರರು* | *(ಉಲ್ಲೇ) 28* |

ಅರ್ಜಿದಾರರ ಪರ : ಶ್ರೀ ಕೆ. ಧೀರಜ್ ಕುಮಾರ್, ವಕೀಲರು ಇವರ ಪರವಾಗಿ
ಶ್ರೀ ಉದಯ್ ಹೊಳ್ಳ, ಹಿರಿಯ ನ್ಯಾಯವಾದಿ;
ಪ್ರತ್ಯರ್ಜಿದಾರರ ಪರ : ಶ್ರೀ ವಿ.ಜಿ. ಭಾನುಪ್ರಕಾಶ್, ಹೆಚ್ಚುವರಿ ಸರ್ಕಾರಿ ವಕೀಲರು, ಇವರ ಪರವಾಗಿ ಶ್ರೀ ಎ.ಎಸ್. ಪೊನ್ನಣ್ಣ, ಹೆಚ್ಚುವರಿ ಅಡ್ವೋಕೇಟ್ ಜನರಲ್.

## ಆಜ್ಞೆ

**ಮುಖ್ಯ ನ್ಯಾಯಮೂರ್ತಿ ಸುಭ್ರೋ ಕಮಲ್ ಮುಖರ್ಜಿ:**

ಅರ್ಜಿದಾರರು ಕಾನೂನುಬಾಹಿರವಾಗಿ ಕಬ್ಬಿಣದ ಅದಿರು ಖನಿಜವನ್ನು ಹೊರ ತೆಗೆದಿದ್ದಾರೆಂದು ಆವರಣದ ಮೇಲೆ 215.75 ಕೋಟಿ ರೂ.ಗಳ ಮೊತ್ತವನ್ನು ಸಂದಾಯ ಮಾಡಲು ಅರ್ಜಿದಾರರಿಗೆ ಆದೇಶಿಸಿ, ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆ ಇವರು ಹೊರಡಿಸಿದ ದಿನಾಂಕ 2ನೇ ನವೆಂಬರ್ 2016ರ ಆದೇಶವನ್ನು ರದ್ದುಗೊಳಿಸಲು ಕೋರಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

2. ಅರ್ಜಿದಾರರ ಪರ ಶ್ರೀ ಉದಯ್ ಹೊಳ್ಳ, ಮಾನ್ಯ ಹಿರಿಯ ನ್ಯಾಯವಾದಿ ಮತ್ತು ಪ್ರತ್ಯರ್ಜಿದಾರರ ಪರ ಶ್ರೀ ಎ.ಎಸ್. ಪೊನ್ನಣ್ಣ, ಮಾನ್ಯ ಹೆಚ್ಚುವರಿ ಅಡ್ವೋಕೇಟ್ ಜನರಲ್ ಇವರ ವಾದಗಳನ್ನು ನಾವು ಆಲಿಸಿದ್ದೇವೆ.

3. ಈ ಮೊಕದ್ದಮೆಯಲ್ಲಿ ಸಂಕ್ಷಿಪ್ತವಾಗಿ ಹೇಳಲಾದ ವಾಸ್ತವಾಂಶಗಳೆಂದರೆ ಜುಲೈ 6, 1954ರಂದು ಮ್ಯಾಂಗನೀಸ್ ಅದಿರು ಮತ್ತು ಬಿಳಿ ಜೇಡಿ ಮಣ್ಣು (ಕೆಯೋಲಿನ್) ತೆಗೆಯಲು, ಚಿಕ್ಕನಾಯಕನ ಹಳ್ಳಿ ತಾಲೂಕಿನಲ್ಲಿ 640 ಎಕರೆ ಭೂಮಿಯ ಸಂಬಂಧದಲ್ಲಿ ಮೈಸೂರು ಸ್ಟೋನ್‌ವೇರ್ ಮತ್ತು ಪಾಟರೀಸ್ ಲಿಮಿಟೆಡ್ (ಎಂಎಸ್‌ಪಿಪಿಎಲ್) ಇವರ ಪರವಾಗಿ ಸಂಖ್ಯೆ 236 ಗಣಿ ಗುತ್ತಿಗೆಯನ್ನು ಮಂಜೂರು ಮಾಡಲಾಯಿತು. ಸದರಿ ಗುತ್ತಿಗೆಯನ್ನು ದಿನಾಂಕ 21ನೇ ಮಾರ್ಚ್ 1961ರಂದು

ವರ್ಗಾವಣೆ ಮತ್ತು ಹಸ್ತಾಂತರಣ ಪತ್ರದ ಮೂಲಕ ಅರ್ಜಿದಾರರಾದ ಶ್ರೀ ದೀಪ್‌ಚಂದ್ ಕಿಶನ್‌ಲಾಲ್ ಇವರಿಗೆ ವರ್ಗಾಯಿಸಲಾಯಿತು. ರಾಜ್ಯ ಸರ್ಕಾರವು, ಸದರಿ ಭೂಮಿಯಿಂದ ಕಬ್ಬಿಣದ ಅದಿರನ್ನು ತೆಗೆಯಲು ಅರ್ಜಿದಾರರಿಗೆ ಅನುಮತಿ ನೀಡಿ 20ನೇ ಜೂನ್, 1962ರಂದು ಒಂದು ಅಧಿಸೂಚನೆಯನ್ನು ಹೊರಡಿಸಿತು.

4. ಮೇಲೆ ಹೇಳಲಾದ ಭೂಮಿಯ ಗುತ್ತಿಗೆಯನ್ನು 5ನೇ ಜುಲೈ 1974ರವರೆಗೆ ನೀಡಿ 26ನೇ ಜೂನ್ 1962ರಂದು ನೋಂದಾಯಿತ ಗುತ್ತಿಗೆ ಪತ್ರವನ್ನು ಅರ್ಜಿದಾರರ ಹೆಸರಿಗೆ ಮೈಸೂರಿನ ರಾಜ್ಯಪಾಲರು ಬರೆದುಕೊಟ್ಟಿದ್ದರು.

5. ಗುತ್ತಿಗೆ ಅವಧಿ ಕೊನೆಗೊಳ್ಳುವ ಮುಂಚೆಯೇ, ಅರ್ಜಿದಾರರು 2ನೇ ಜುಲೈ 1973ರಂದು, 640 ಎಕರೆಗಳ ಪೈಕಿ 310 ಎಕರೆಗಳಷ್ಟು ಕಡಿಮೆಗೊಳಿಸಿದ ಪ್ರದೇಶದ ಸಂಬಂಧದಲ್ಲಿ ಸದರಿ ಗಣಿ ಗುತ್ತಿಗೆಯ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದರು. ರಾಜ್ಯ ಸರ್ಕಾರವು ನವೀಕರಣವನ್ನು ಪರಿಗಣಿಸದೇ ಇದ್ದುದರಿಂದ, ಅರ್ಜಿದಾರರು ಕೇಂದ್ರ ಸರ್ಕಾರದ ಮುಂದೆ ಪರಿಷ್ಕರಣೆಗಾಗಿ ಅರ್ಜಿ ಸಲ್ಲಿಸಿದರು ಮತ್ತು 18ನೇ ಆಗಸ್ಟ್ 1979ರ ಆದೇಶದ ಪ್ರಕಾರ ಕೇಂದ್ರ ಸರ್ಕಾರವು ಗುತ್ತಿಗೆ ನವೀಕರಣಕ್ಕೆ ನಿರ್ದೇಶನ ನೀಡಿತು.

6. ಪರಿಷ್ಕರಣಾ ಪ್ರಾಧಿಕಾರಿಯವರು ಹೊರಡಿಸಿದ ಆದೇಶದ ಹೊರತಾಗಿಯೂ, ರಾಜ್ಯ ಸರ್ಕಾರವು ದೀರ್ಘಾವಧಿಗಾಗಿ ಗುತ್ತಿಗೆಯನ್ನು ನವೀಕರಿಸಲಿಲ್ಲ. ತರುವಾಯ, 11ನೇ ಏಪ್ರಿಲ್ 2002ರಂದು, ಮೋಜಣಿ ಮತ್ತು ಭೂಮಿಯ ಗಡಿ ಗುರುತಿಸುವಿಕೆ ಕಾರ್ಯವನ್ನು ಕೈಗೊಳ್ಳಲಾಯಿತು ಹಾಗೂ ಗಣಿ ಮತ್ತು ಭೂ ವಿಜ್ಞಾನಗಳ ನಿರ್ದೇಶಕರ ಕಚೇರಿಗೆ ಒಂದು ವರದಿಯನ್ನು ಸಲ್ಲಿಸಲಾಯಿತು. ಆ ತರುವಾಯ ಮಾತ್ರವೇ ಅರ್ಜಿದಾರರ ಪರ 310 ಎಕರೆಗಳಷ್ಟು ಭೂಮಿಯ ಗುತ್ತಿಗೆಯನ್ನು ಮಂಜೂರು ಮಾಡಿ 1ನೇ ಏಪ್ರಿಲ್ 2004ರಂದು ನೋಂದಾಯಿತ ಗುತ್ತಿಗೆ ಪತ್ರವನ್ನು ಬರೆದುಕೊಡಲಾಯಿತು. 27ನೇ ಏಪ್ರಿಲ್ 2002ರಿಂದ ಪ್ರಾರಂಭವಾಗುವಂತೆ 20

ವರ್ಷಗಳ ಅವಧಿಗಾಗಿ ಸ್ವತ್ತನ್ನು ಗುತ್ತಿಗೆಗೆ ನೀಡಲಾಗಿದೆ ಎಂದು ಗುತ್ತಿಗೆ ಪತ್ರದಿಂದ ತಿಳಿದುಬರುತ್ತದೆ.

7. ನವೀಕೃತ ಗಣಿ ಗುತ್ತಿಗೆಯನ್ನು ಬರೆದುಕೊಟ್ಟ ನಂತರ, ಅರ್ಜಿದಾರರು ತಮ್ಮ ಗಣಿ ಸಂಬಂಧಿತ ಕಾರ್ಯಚಟುವಟಿಕೆಗಳನ್ನು ಮುಂದುವರಿಸಿದರು. ಲೆಕ್ಕಪರಿಶೋಧನಾ ವರದಿಗಳಿಂದ ಹಾಗೂ 2001–02ರಿಂದ ಪ್ರಾರಂಭಗೊಂಡು 2009–10ನೇ ಸಾಲಿಗಾಗಿ, 29ನೇ ಸೆಪ್ಟೆಂಬರ್ 2010ರ ವರದಿಯೊಂದಿಗೆ ಕೊನೆಗೊಳ್ಳುವ ವಿವಿಧ ವರ್ಷಗಳಿಗೆ ಸಂಬಂಧಿಸಿದ ಗಣಿ ಮತ್ತು ಭೂ ವಿಜ್ಞಾನಗಳ ಉಪ –ನಿರ್ದೇಶಕರ ತಪಾಸಣೆ ಮತ್ತು ಪರಿಶೀಲನಾ ವರದಿಗಳಿಂದ ಕಂಡುಬಂದಂತೆ ತಾವು ಹೊರತೆಗೆದ ಖನಿಜಗಳ ಮೇಲೆ ಅವರು ರಾಯಧನವನ್ನು ಸಂದಾಯ ಮಾಡಿರುತ್ತಾರೆ.

8. 2007ರ ಅವಧಿಯಲ್ಲಿ, ಕರ್ನಾಟಕ ಸರ್ಕಾರವು ಕರ್ನಾಟಕದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ವಿವಿಧ/ವಿವಾದಗಳನ್ನು ಲೋಕಾಯುಕ್ತಕ್ಕೆ ಉಲ್ಲೇಖಿಸಿತು. 27ನೇ ಜುಲೈ 2011ರಂದು, ಲೋಕಾಯುಕ್ತವು, ರಾಜ್ಯ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿತು. ಸದರಿ ವರದಿಯಲ್ಲಿ ಅರ್ಜಿದಾರರು ಅಕ್ರಮವಾಗಿ ಗಣಿಗಾರಿಕೆ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವುದಾಗಿ ಸೂಚಿಸಿ, 2003ರಿಂದ 2008ನೇ ಅವಧಿಯ ನಡುವೆ ಕಬ್ಬಿಣದ ಅದಿರನ್ನು ತೆಗೆದ ಮೌಲ್ಯವಾಗಿ 215.75 ಕೋಟಿ ರೂಪಾಯಿಗಳನ್ನು ವಸೂಲು ಮಾಡಲು ಶಿಫಾರಸ್ಸು ಮಾಡಲಾಯಿತು. ಆರೋಪಿಸಲಾದ ನಷ್ಟವನ್ನು ಲೆಕ್ಕಹಾಕಲು ಪ್ರತಿ ಮೆಟ್ರಿಕ್ ಟನ್ನಿಗೆ 1500/– ರೂ.ಗಳ ಮೊತ್ತವು ಬಂದಿದ್ದಕ್ಕೆ ಏನು ಆಧಾರ ಎಂಬುದನ್ನು ವರದಿಯಲ್ಲಿ ಸೂಚಿಸಿರುವುದಿಲ್ಲ. ಆದಾಗ್ಯೂ, ಗಣಿ ಮತ್ತು ಭೂ ವಿಜ್ಞಾನಗಳ ನಿರ್ದೇಶಕರು, 22ನೇ ಜೂನ್ 2012ರಂದು, ಅರ್ಜಿದಾರರಿಂದ 215.75 ಕೋಟಿ ರೂ.ಗಳ ಮೊತ್ತವನ್ನು ಏಕೆ ವಸೂಲು ಮಾಡಬಾರದು ಎಂಬುದಕ್ಕೆ ಕಾರಣ ನೀಡಲು ಅರ್ಜಿದಾರರಿಗೆ ಒಂದು ಕಾರಣ ತೋರಿಸುವ ನೋಟೀಸನ್ನು ನೀಡಿದರು. ಅರ್ಜಿದಾರರು ತಮ್ಮ

ಹೊಣೆಗಾರಿಕೆಯನ್ನು ಅಲ್ಲಗಳೆದು ಈ ನೋಟೀಸಿಗೆ ಒಂದು ಉತ್ತರವನ್ನು ಕಳುಹಿಸಿದರು.

9. ಈ ನಡುವೆ, 18ನೇ ಏಪ್ರಿಲ್ 2013ರಂದು, 'ಸಿ' ಪ್ರವರ್ಗದ ಅಡಿಯಲ್ಲಿ ಅನುಮತಿ ನೀಡಲಾದ ಹಾಗೂ ಅದರಡಿ ಬರುವ ಎಲ್ಲಾ ಗಣಿ ಗುತ್ತಿಗೆಗಳನ್ನು ರದ್ದುಗೊಳಿಸಿ ನಿರ್ದೇಶನ ನೀಡಬೇಕೆಂದು ಕೋರಿ ಸಮಾಜ ಪರಿವರ್ತನಾ ಸಮುದಾಯವು ಭಾರತ ಸರ್ವೋಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ (ಸಿವಿಲ್) ಸಂಖ್ಯೆ 562/2009ನ್ನು ಸಲ್ಲಿಸಿತು. ಅದಕ್ಕನುಸಾರವಾಗಿ, ರಾಜ್ಯ ಸರ್ಕಾರವು, ತನ್ನ ಅಧಿಸೂಚನೆ ದಿನಾಂಕ: 12ನೇ ಸೆಪ್ಟೆಂಬರ್ 2013ರ ಮೂಲಕ ಅರ್ಜಿದಾರರ ಪರವಾಗಿ ಮಂಜೂರು ಮಾಡಿದ ಗುತ್ತಿಗೆಯೂ ಸೇರಿದಂತೆ ವಿವಿಧ ಗುತ್ತಿಗೆಗಳನ್ನು ರದ್ದುಗೊಳಿಸಿತು.

10. ಮಾನ್ಯ ಹಿರಿಯ ನ್ಯಾಯವಾದಿಗಳಾದ ಶ್ರೀ ಉದಯ್ ಹೊಳ್ಳ ಅವರು, ರಿಟ್ ಅರ್ಜಿ ಸಂಖ್ಯೆ: 2009ರ 562ರಲ್ಲಿ, ಪ್ರವರ್ಗ–ಎ, ಬಿ ಮತ್ತು ಸಿ ಗುತ್ತಿಗೆದಾರರು ನಡೆಸುತ್ತಿರುವ ಗಣಿಗಾರಿಕೆಯ ಕಾರಣದಿಂದ ಖಜಾನೆಗೆ ಉಂಟಾದ ನಷ್ಟದ ಪ್ರಮಾಣವನ್ನು ನಿರ್ಧರಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕೆಂದು ಕೋರಿ ಸಮಾಜ ಪರಿವರ್ತನಾ ಸಮುದಾಯವು ಒಂದು ಅರ್ಜಿಯನ್ನು ಐ.ಎ.ಸಂಖ್ಯೆ 2013ರ 140 ಆಗಿ ಸಲ್ಲಿಸಿತು ಮತ್ತು ದಿನಾಂಕ 18ನೇ ಏಪ್ರಿಲ್ 2013ರಂದು 'ಸಿ' ಪ್ರವರ್ಗದಲ್ಲಿ ಬರುವ ಗುತ್ತಿಗೆಗಳನ್ನು ರದ್ದುಗೊಳಿಸಲು ನಿರ್ದೇಶಿಸಿ ಭಾರತ ಸರ್ವೋಚ್ಚ ನ್ಯಾಯಾಲಯವು ತನ್ನ ಅಂತಿಮ ಆದೇಶವನ್ನು ಹೊರಡಿಸುವಾಗ, ಸದರಿ ಐ.ಎ.ಸಂಖ್ಯೆ 2013ರ 140 ಸೇರಿದಂತೆ ಇತ್ಯರ್ಥದಲ್ಲಿರುವ ಎಲ್ಲಾ ವಾದಕಾಲೀನ ಅರ್ಜಿಗಳನ್ನು ವಜಾಗೊಳಿಸಿತು ಎಂದು ವಾದಿಸಿದ್ದಾರೆ. ಮುಂದುವರಿದು, ಅವರು, ತರುವಾಯದಲ್ಲಿ ಸದರಿ ಸಮಾಜ ಪರಿವರ್ತನಾ ಸಮುದಾಯವು ರಿಟ್ ಅರ್ಜಿ ಸಂಖ್ಯೆ 2009ರ 562ರಲ್ಲಿ, ಭಾರತದ ಸರ್ವೋಚ್ಚ ನ್ಯಾಯಾಲಯದ ಮುಂದೆ ಮತ್ತೊಂದು ಐ.ಎ.ಸಂಖ್ಯೆ 2013ರ 185ನ್ನು ಸಲ್ಲಿಸಿದರೆಂದು ವಾದಿಸಿದ್ದಾರೆ.

ಸದರಿ ಅರ್ಜಿಯಲ್ಲಿನ ಮನವಿಯು, ಅರ್ಜಿದಾರರಿಂದ 215.75 ಕೋಟಿ ರೂ.ಗಳ ಮೊತ್ತದ ವಸೂಲಾತಿಗೆ ಶಿಫಾರಸ್ಸು ಮಾಡಲಾಗಿರುವ ದಿನಾಂಕ: 27ನೇ ಜುಲೈ 2011ರ ಲೋಕಾಯುಕ್ತ ವರದಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸುವುದನ್ನು ಒಳಗೊಂಡಿದೆ. ಭಾರತ ಸರ್ವೋಚ್ಚ ನ್ಯಾಯಾಲಯವು, ಪುನರವಲೋಕನ ಅರ್ಜಿಯನ್ನು ಸಲ್ಲಿಸುವ ಅವಕಾಶದೊಂದಿಗೆ, 26ನೇ ಆಗಸ್ಟ್ 2013ರಂದು ಭಾರತ ಸರ್ವೋಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ವಜಾಗೊಳಿಸಿದೆ.

11. ಐ.ಎ. ಸಂಖ್ಯೆ: 2013ರ 185ನ್ನು ವಜಾಗೊಳಿಸಿದ ನಂತರ, ಸಮಾಜ ಪರಿವರ್ತನಾ ಸಮುದಾಯವು, ರಿಟ್ ಅರ್ಜಿ ಸಂಖ್ಯೆ 2009ರ 562ರಲ್ಲಿ, 18ನೇ ಏಪ್ರಿಲ್ 2013ರ ಅಂತಿಮ ಆದೇಶದ ಪುನರವಲೋಕನ ಕೋರಿ ಪುನರವಲೋಕನ ಅರ್ಜಿ ಸಂಖ್ಯೆ 2800/2013 ಆಗಿ ನೋಂದಾಯಿಸಿದ ಒಂದು ಪುನರವಲೋಕನ ಅರ್ಜಿಯನ್ನು ಸಲ್ಲಿಸಿದರು. ಸದರಿ ಪುನರವಲೋಕನ ಅರ್ಜಿಯಲ್ಲಿ, 'ಸಿ' ಪ್ರವರ್ಗದ ಗಣಿಗಳಲ್ಲಿ ನಡೆಸಲಾಗುತ್ತಿರುವ ಗಣಿ ಕಾರ್ಯಚಟುವಟಿಕೆಗಳ ಕಾರಣದಿಂದ ಸರ್ಕಾರಿ ಖಜಾನೆಗೆ ಉಂಟಾದ ನಷ್ಟದ ಪ್ರಮಾಣವನ್ನು ನಿರ್ಧರಿಸಲು ನಿರ್ದೇಶನ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದೆ. ಅವರ ಅರ್ಜಿ ಐ.ಎ. ಸಂಖ್ಯೆ 140ರ ಮೇಲೆ ಯಾವುದೇ ಆದೇಶವನ್ನು ಹೊರಡಿಸಿಲ್ಲವೆಂದು ಹೇಳಲಾಯಿತು. ಅರ್ಜಿದಾರರನ್ನು ಮತ್ತು ಅರ್ಜಿದಾರರು ಹೊರತೆಗೆದ ಕಬ್ಬಿಣದ ಅದಿರಿನ ಪ್ರಮಾಣವನ್ನು ಕುರಿತು ಸಹ ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು ಹಾಗೂ ಕಬ್ಬಿಣದ ಅದಿರನ್ನು ಹೊರತೆಗೆದ ಕಾರಣದಿಂದ ಉಂಟಾದ ನಷ್ಟಗಳ ವಸೂಲಾತಿಗಾಗಿ ಆದೇಶವನ್ನು ಹೊರಡಿಸಬೇಕೆಂದು ಅದರಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು. ಈ ಪುನರವಲೋಕನ ಅರ್ಜಿಯನ್ನು ಸಹ ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ 29ನೇ ಜುಲೈ 2015ರಂದು ವಜಾಗೊಳಿಸಿತ್ತು.

12. 13ನೇ ಮೇ, 2014ರಂದು, ಗಣಿ ಮತ್ತು ಭೂ ವಿಜ್ಞಾನಗಳ ನಿರ್ದೇಶಕರು, ದಿನಾಂಕ 22ನೇ ಜೂನ್, 2012ರ ಕಾರಣ ತೋರಿಸುವ ನೋಟೀಸಿಗೆ ಅರ್ಜಿದಾರರ

ಆಕ್ಷೇಪಣೆಗಳು ಸಮರ್ಥನೀಯವಲ್ಲವೆಂದು ಹಾಗೂ ಅರ್ಜಿದಾರರು 215.75 ಕೋಟಿ ರೂ.ಗಳ ಮೊತ್ತವನ್ನು ಸಂದಾಯ ಮಾಡಬೇಕೆಂದು ನಿರ್ಣಯಿಸಿ ಆದೇಶವನ್ನು ಹೊರಡಿಸಿದರು. ಈ ಆದೇಶವು ದಿನಾಂಕ 27ನೇ ಜುಲೈ 2011ರ ಲೋಕಾಯುಕ್ತ ವರದಿಯನ್ನಾಧರಿಸಿದೆ.

13. ನಿರ್ದೇಶಕರ ಈ ಆದೇಶವನ್ನು, 2015ರ ರಿಟ್ ಅರ್ಜಿ ಸಂಖ್ಯೆಗಳು 50418-420ರವರೆಗಿನ ಹಿಂದಿನ ರಿಟ್ ಅರ್ಜಿಗಳಲ್ಲಿ ಅರ್ಜಿದಾರರು ಪ್ರಶ್ನಿಸಿದ್ದರು ಹಾಗೂ ಈ ನ್ಯಾಯಾಲಯವು ಗಣಿ ಮತ್ತು ಭೂ ವಿಜ್ಞಾನಗಳ ನಿರ್ದೇಶಕರ ಆದೇಶವನ್ನು ರದ್ದುಗೊಳಿಸಿತ್ತು ಮತ್ತು ವಿಷಯವನ್ನು ಪುನರ್ವಿಚಾರಣೆಗೆ ಹಿಂದಿರುಗಿಸಿತ್ತು. ಆ ತರುವಾಯದಲ್ಲಿ, ಅರ್ಜಿದಾರರು 215.75 ಕೋಟಿ ರೂ.ಗಳ ಮೊತ್ತವನ್ನು ಸಂದಾಯ ಮಾಡಲು ಹೊಣೆಗಾರರಾಗಿದ್ದಾರೆ ಎಂದು ನಿರ್ಣಯಿಸಿ ನಿರ್ದೇಶಕರು ಅಂತಹುದೇ ಆದೇಶವನ್ನು ಹೊರಡಿಸಿದ್ದರು. ಈ ತಗಾದೆ ನೋಟೀಸನ್ನು ಈ ರಿಟ್ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

14. ಮುಂಚಿನ ಕಾರಣ ತೋರಿಸುವ ನೋಟೀಸು ಮತ್ತು ಪ್ರಶ್ನಿತ ಆದೇಶವನ್ನು ಪ್ರಸ್ತಾಪಿಸಿ, ಶ್ರೀ ಹೊಳ್ಳ ಅವರು, ಭಾರತ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಆದೇಶಗಳ ಹಿನ್ನೆಲೆಯಲ್ಲಿ ಕಬ್ಬಿಣದ ಅದಿರನ್ನು ಹೊರತೆಗೆದಿರುವುದು ಅಕ್ರಮವೆಂದು ನಿರ್ಣಯಿಸುವ ಮೂಲಕ ಹೊರತೆಗೆಯಲಾದ ಕಬ್ಬಿಣದ ಅದಿರಿನ ಮೌಲ್ಯವನ್ನು ವಸೂಲು ಮಾಡುವಂತೆ ಕೋರಲು ಗಣಿ ಮತ್ತು ಭೂ ವಿಜ್ಞಾನಗಳ ನಿರ್ದೇಶಕರಿಗೆ ಖಂಡಿತವಾಗಿಯೂ ಅವಕಾಶವಿರಲಿಲ್ಲ ಎಂದು ವಾದಿಸಿದ್ದಾರೆ.

15. ಗುತ್ತಿಗೆ ಪತ್ರವು ದಿನಾಂಕ 4ನೇ ಜುಲೈ 1974ರಿಂದ 20 ವರ್ಷಗಳ ಅವಧಿಯದ್ದಾಗಿದ್ದು, ಅದು 5ನೇ ಜುಲೈ 1994ರಂದು ಕೊನೆಗೊಂಡಿದೆ; ಹಾಗಾಗಿ, 2003ರಿಂದ 2008ನೇ ಸಾಲಿನವರೆಗಿನ ಕಾಲಾವಧಿಯಲ್ಲಿ ಕಬ್ಬಿಣದ ಅದಿರನ್ನು ಹೊರತೆಗೆದಿರುವುದು ಅಕ್ರಮವಾದುದಾಗಿದೆ ಮತ್ತು ಅದರಿಂದಾಗಿ, ನಿರ್ದೇಶಕರ

ಆದೇಶವು ಸೂಕ್ತವಾದುದಾಗಿದೆ ಎಂಬುದು ಶ್ರೀ ಪೊನ್ನಣ್ಣ, ಮಾನ್ಯ ಹೆಚ್ಚುವರಿ ಅಡ್ವೊಕೇಟ್ ಜನರಲ್ ಇವರ ವಾದವಾಗಿದೆ. ಇದಕ್ಕೆ ಉತ್ತರವಾಗಿ, ಅರ್ಜಿದಾರ ಪರ ಹಾಜರಾಗಿರುವ ಶ್ರೀ ಉದಯ್ ಹೊಳ್ಳ, ಮಾನ್ಯ ಹಿರಿಯ ನ್ಯಾಯವಾದಿ ಇವರು, ಗೇಣಿಯು 7ನೇ ಏಪ್ರಿಲ್ 2002ರಿಂದ 20 ವರ್ಷಗಳ ಅವಧಿಯದ್ದಾಗಿದೆ ಎಂದು ನೋಂದಾಯಿತ ಗುತ್ತಿಗೆ ಪತ್ರವು, ನಿರ್ದಿಷ್ಟವಾಗಿ ತಿಳಿಸುತ್ತದೆ ಎಂದು ವಾದ ಮಂಡಿಸಿದ್ದಾರೆ.

16. ಎರಡೂ ಪಕ್ಷಗಳ ಮಾನ್ಯ ನ್ಯಾಯವಾದಿಗಳ ವಾದಗಳನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ.

17. ಅವಿವಾದೀತವಾಗಿ, ಇಲ್ಲಿ ಪ್ರಶ್ನಿಸಲಾದ ಆದೇಶವು, 2003ರಿಂದ 2008ರವರೆಗಿನ ಕಾಲಾವಧಿಯಲ್ಲಿ ಕಾನೂನುಬಾಹಿರವಾಗಿ ಸಾಗಿಸಲಾಗಿದೆ ಎಂದು ಆಪಾದಿಸಲಾಗಿರುವ ಖನಿಜಗಳ ಮೌಲ್ಯವನ್ನು ವಸೂಲು ಮಾಡುವ ಕುರಿತದ್ದಾಗಿದೆ. 2003–04 ಮತ್ತು 2004–05ನೇ ವರ್ಷಗಳಿಗೆ ಸಂಬಂಧಿಸಿದಂತೆ, ಉಪ–ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆ, ತುಮಕೂರು ಇವರು ಸಿದ್ಧಪಡಿಸಿದ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಗಳು (ಅನುಬಂಧ 'ಕೆ1'), ಅರ್ಜಿದಾರರು ಸದರಿ ಹಣಕಾಸು ವರ್ಷಾವಧಿಯಲ್ಲಿ ಹೆಚ್ಚುವರಿ ರಾಯಧನ ಸಂದಾಯ ಮಾಡಿರುವರೆಂದು ಸೂಚಿಸುತ್ತವೆ. ಗಣಿ ಮತ್ತು ಭೂ ವಿಜ್ಞಾನಗಳ ಉಪ ನಿರ್ದೇಶಕರು, ತುಮಕೂರು ಇವರ ದಿನಾಂಕ 12ನೇ ಸೆಪ್ಟೆಂಬರ್ 2006ರ ಪತ್ರವು (ಅನುಬಂಧ 'ಕೆ2'), 2005–06ನೇ ಸಾಲಿನ ಲೆಕ್ಕಪತ್ರಗಳನ್ನು 20ನೇ ಮೇ, 2006ರಂದು ಪರಿಶೀಲಿಸಲಾಗಿದ್ದು, ಬಾಕಿ ರಾಯಧನ ಮೊತ್ತವನ್ನು ಸಂದಾಯ ಮಾಡಲು ಅರ್ಜಿದಾರರಿಗೆ ತಿಳಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ. ಹಾಗೆಯೇ, ಗಣಿ ಮತ್ತು ಭೂ ವಿಜ್ಞಾನಗಳ ಉಪ ನಿರ್ದೇಶಕರು, ತುಮಕೂರು ಇವರು 24ನೇ ಅಕ್ಟೋಬರ್ 2007 ಮತ್ತು 23ನೇ ಜುಲೈ 2008ರಂದು ಬರೆದ ಪತ್ರಗಳು (ಅನುಬಂಧ ಕೆ3 ಮತ್ತು ಕೆ4) ಸಹ, 2006–07 ಮತ್ತು 2007–08ನೇ ಸಾಲುಗಳಿಗೆ

ಸಂಬಂಧಿಸಿದ ಗಣಿ ಲೆಕ್ಕಗಳನ್ನು ಸಹ ಪರಿಶೀಲಿಸಲಾಗಿದೆ ಎಂಬುದನ್ನು ಸೂಚಿಸುತ್ತವೆ. ಈ ಲೆಕ್ಕಪರಿಶೋಧನಾ ವರದಿಗಳನ್ನು ಪರಿಶೀಲಿಸಲಾಗಿ, ನಿರ್ದಿಷ್ಟ ಕಾಲಾವಧಿಯಲ್ಲಿ ಎಂದರೆ 2003–08 ಈ ಕಾಲಾವಧಿಯಲ್ಲಿ ಅರ್ಜಿದಾರರು ನಡೆಸುತ್ತಿದ್ದ ಗಣಿ ಕಾರ್ಯಚಟುವಟಿಕೆಗಳ ಬಗ್ಗೆ ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆಗೆ ಸಂಪೂರ್ಣ ಅರಿವಿತ್ತು ಎಂಬ ಪ್ರತಿರೋಧಿಸಲಾಗದ ತೀರ್ಮಾನಕ್ಕೆ ಬರಲು ಅವು ಎಡೆ ಮಾಡಿಕೊಡುತ್ತವೆ. ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆಯು ಈ ಎಲ್ಲಾ ವರ್ಷಗಳ ಗಣಿ ಸಂಬಂಧಿತ ಲೆಕ್ಕಗಳ ಲೆಕ್ಕಪರಿಶೋಧನೆ ಮಾಡಿದೆ ಹಾಗೂ ಅರ್ಜಿದಾರರು ಹೊರತೆಗೆದ ಖನಿಜಗಳ ಮೇಲೆ ರಾಯಧನವನ್ನು ಸಂಗ್ರಹಿಸಿದೆ. ಆದುದರಿಂದ, ಪ್ರತ್ಯರ್ಜಿದಾರ ರಾಜ್ಯವು ವಾದಿಸಿದ ಕಾನೂನುಬಾಹಿರವಾಗಿ ಗಣಿಗಾರಿಕೆ ನಡೆಸಲಾಗಿದೆ ಎಂಬ ಆರೋಪದ ಆಧಾರವೇ ಅಸಂಬದ್ಧವಾಗಿದೆ ಮತ್ತು ಸಮರ್ಥಿಸಲು ಅತ್ಯಂತ ದುರ್ಬಲವಾದ ವಾದವಾಗಿವೆ.

18. ಲೋಕಾಯುಕ್ತದ ಶಿಫಾರಸ್ಸಿನ ಆಧಾರದ ಮೇಲೆ, 215.75 ಕೋಟಿ ರೂ.ಗಳ ಮೊತ್ತಕ್ಕಾಗಿ ಕ್ಲೇಮು ಮಾಡಿರುವುದಕ್ಕೆ ಸಂಬಂಧಿಸಿದಂತೆ, ಈ ನ್ಯಾಯಾಲಯವು, ***ಎಂ.ಎ. ಪಾರ್ಥಸಾರಥಿ –ವಿರುದ್ಧ– ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಮತ್ತು ಇತರರು***[1] ಮೊಕದ್ದಮೆಯಲ್ಲಿ, ಲೋಕಾಯುಕ್ತವು ಸರ್ಕಾರಿ ನೌಕರರ ವಿರುದ್ಧದ ದೂರುಗಳನ್ನು ಮಾತ್ರ ತನಿಖೆ ಮಾಡುವ ಅಧಿಕಾರ ಹೊಂದಿದೆಯೇ ಹೊರತು, ಖಾಸಗಿ ವ್ಯಕ್ತಿಗಳ ವಿರುದ್ಧದ ದೂರುಗಳನ್ನು ಕುರಿತು ತನಿಖೆ ಮಾಡಲು ಅಲ್ಲ ಎಂದು ತೀರ್ಪು ನೀಡಿದೆ ಮತ್ತು ಖಾಸಗಿ ವ್ಯಕ್ತಿಯು ಭೂ ಒತ್ತುವರಿ ಮಾಡಿಕೊಂಡಿರುವನೆಂದು ನಿರ್ಣಯಿಸಿ ಲೋಕಾಯುಕ್ತವು ಹೊರಡಿಸಿದ ಆದೇಶವನ್ನು ರದ್ದುಗೊಳಿಸಿದೆ. ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಮೇರೆಗೆ ಪರಿಭಾಷಿಸಲಾದಂತೆ ಸರ್ಕಾರಿ ನೌಕರನ ವಿರುದ್ಧದ ದೂರಿನ ಸಂಬಂಧದಲ್ಲಿ ಮಾತ್ರ ಲೋಕಾಯುಕ್ತವು ತನಿಖೆ ಕೈಗೊಳ್ಳಬಹುದಾಗಿದೆ ಎಂದು ನಿರ್ಣಯಿಸಲಾಗಿದೆ.

---

1. ಐಎಲ್‌ಆರ್ 2009 ಕೆಎಆರ್ 1940

19. ಗುತ್ತಿಗೆ ಪತ್ರವನ್ನು, ರಿಟ್ ಅರ್ಜಿ ಜೊತೆಗೆ ಅನುಬಂಧ – ಎಚ್ ಆಗಿ ಹಾಜರುಪಡಿಸಲಾಗಿದೆ. ಅದು, 27ನೇ ಏಪ್ರಿಲ್ 2002ರಿಂದ 20 ವರ್ಷಗಳ ಅವಧಿಗಾಗಿ ಇರುವ ಗುತ್ತಿಗೆ ಪತ್ರವೆಂದು ಸೂಚಿತವಾಗುತ್ತದೆ. ಪ್ರತ್ಯರ್ಜಿದಾರರ ಪರವಾಗಿ ಸಲ್ಲಿಸಿದ ಆಕ್ಷೇಪಣೆಗಳ ಹೇಳಿಕೆಯಲ್ಲಿ ಗುತ್ತಿಗೆಯ ಪ್ರಾರಂಭದ ದಿನಾಂಕವನ್ನು ವಾದಪತ್ರದಲ್ಲಿ ತಪ್ಪಾಗಿ ದಾಖಲಿಸಲಾಗಿದೆ ಎಂದು ವಾದಿಸಲಾಗಿದೆ. ಅದೆಂದರೆ:

> *"14. ಅರ್ಜಿದಾರನಿಗೆ ಮಂಜೂರು ಮಾಡಲಾದ ಗಣಿಗಾರಿಕೆ ಗುತ್ತಿಗೆ ಅವಧಿಯು ಅನುಬಂಧ–ಎಚ್ ಇದರಲ್ಲಿ ದಿನಾಂಕ 05.07.1974ರಿಂದ 04.07.1994 ಎಂದಿತ್ತೆಂದು ಪ್ರತಿಪಾದಿಸಲಾಗಿದೆ. ಅರ್ಜಿದಾರರು ತೀರ್ಮಾನಿಸಿದಂತೆ ಯಾವುದೇ ಸಿಂಧುವಾದ ಗಣಿ ಗುತ್ತಿಗೆ ಇರದಿರುವ ಕಾಲಾವಧಿಯಲ್ಲಿ ಅರ್ಜಿದಾರರು ಅದಿರನ್ನು ಹೊರತೆಗೆದಿದ್ದಾರೆ. ಆದ್ದರಿಂದ ಪ್ರತ್ಯರ್ಜಿದಾರರು ಹೊರಡಿಸಿದ ಪ್ರಶ್ನಿತ ಆದೇಶವು ಕಾನೂನಿಗೆ ಅನುಗುಣವಾಗಿಯೇ ಇದೆ.*
>
> *15. <u>ಅನುಬಂಧ–ಎಚ್</u> ಇದರಲ್ಲಿ ಕೆಲವು ತಪ್ಪುಗಳನ್ನು ಎಸಗಿರಬೇಕೆಂದು ಕಂಡುಬರುತ್ತದೆ ಮತ್ತು ಅದರಲ್ಲಿ ಅರ್ಜಿದಾರರಿಗೆ ಮಂಜೂರು ಮಾಡಿದ ಗುತ್ತಿಗೆಯು ದಿನಾಂಕ 27.04.2002ರಿಂದ ಪ್ರಾರಂಭವಾಗುತ್ತದೆಂದು ಹೇಳಲಾಗಿದೆ ಎಂದು ವಾದಿಸಲಾಗಿದೆ. ಆದಾಗ್ಯೂ, ಸದರಿ ನಮೂದು ಅರ್ಜಿದಾರರಿಗೆ ಮಂಜೂರು ಮಾಡಿದ ಗಣಿ ಗುತ್ತಿಗೆಯು ತಪ್ಪಾಗಿದ್ದು, ದಿನಾಂಕ: 04.07.1994ರಂದು ಅದು ಕೊನೆಗೊಳ್ಳುತ್ತದೆ ಹಾಗೂ ದಿನಾಂಕ 4.7.1994ಕ್ಕೆ ತರುವಾಯುದಲ್ಲಿ ಅರ್ಜಿದಾರರ ಗುತ್ತಿಗೆಯುನ್ನು <u>ವಿಸ್ತರಿಸಿರುವುದಿಲ್ಲ ಅಥವಾ ನವೀಕರಿಸಿರುವುದಿಲ್ಲ.</u>"*

20. ಗಣಿ ಗುತ್ತಿಗೆಯು ಒಂದು ನೋಂದಾಯಿತ ದಸ್ತಾವೇಜಾಗಿದೆ. ಗುತ್ತಿಗೆ ಪತ್ರದ 9ನೇ ಖಂಡದಲ್ಲಿ ಸಹ, ಸ್ಟ್ಯಾಂಪ್ ಸುಂಕವನ್ನು ನಿರೀಕ್ಷಿತ ರಾಯಧನದ ಆಧಾರದ ಮೇಲೆ ಲೆಕ್ಕ ಹಾಕಲಾಗಿರುವುದರಿಂದ, ಗುತ್ತಿಗೆಯು ಮುಂದಿನ ಅವಧಿಗಾಗಿ ಇದೆ ಎಂಬುದನ್ನು ಸೂಚಿಸುತ್ತದೆ. ಈಗಾಗಲೇ ಗುತ್ತಿಗೆಯು ನೋಂದಾಯಿತ ಗುತ್ತಿಗೆ ಪತ್ರವನ್ನು ಬರೆದುಕೊಡುವ ಸಮಯಕ್ಕೆ ಮೊದಲೇ ಕೊನೆಗೊಂಡಿದ್ದರೆ, ರಾಯಧನವನ್ನು ಮತ್ತು ಸ್ಟ್ಯಾಂಪ್ ಸುಂಕವನ್ನು ಸದರಿ ಅವಧಿಯನ್ನಾಧರಿಸಿ ಲೆಕ್ಕ ಹಾಕಲಾಗುತ್ತಿತ್ತು. ತದ್ವಿರುದ್ಧವಾಗಿ, ಸ್ಟ್ಯಾಂಪ್ ಸುಂಕವನ್ನು, ಮುಂದಿನ ಸಂದರ್ಭವಾಗಿರುವ ನಿರೀಕ್ಷಿತ ರಾಯಧನವನ್ನಾಧರಿಸಿ ಗುತ್ತಿಗೆ ಪತ್ರದ ಆಧಾರದ ಮೇಲೆ ಸಂದಾಯ ಮಾಡಲಾಗಿದೆ. ಗಣಿ ಮತ್ತು ಭೂ ವಿಜ್ಞಾನಗಳ ಇಲಾಖೆಯು ಕಬ್ಬಿಣದ ಅದಿರಿನ ಗಣಿಗಾರಿಕೆಗೆ ಅನುಮತಿ ನೀಡಿದ್ದು, ನವೀಕೃತ ಗಣಿ ಗುತ್ತಿಗೆಯನ್ನು ಬರೆದುಕೊಟ್ಟ ದಿನಾಂಕದ ತರುವಾಯದ ಅವಧಿಗಾಗಿ ರಾಯಧನವನ್ನು ಸಂಗ್ರಹಿಸಲಾಗಿದೆ. ಆದುದರಿಂದ, ಗಣಿ ಗುತ್ತಿಗೆಯಲ್ಲಿ ತಪ್ಪಾದ ದಿನಾಂಕವನ್ನು ದಾಖಲಿಸಲಾಗಿದೆ ಎಂಬ ವಾದವು ಸಮರ್ಥನೀಯವಾದುದಲ್ಲ ಹಾಗೂ ತಿರಸ್ಕರಿಸಬೇಕೆಂಬುದಕ್ಕೆ ಮಾತ್ರ ಗಮನ ಹರಿಸಲಾಗಿದೆ.

21. ಈ ಮುಂಚಿನ ಸಂದರ್ಭಗಳಲ್ಲಿ, 1994ರಿಂದ ಗುತ್ತಿಗೆ ನವೀಕರಣಕ್ಕಾಗಿ ನಿರ್ದೇಶನಗಳನ್ನು ಕೋರಿ ಅರ್ಜಿದಾರರು, ಈ ನ್ಯಾಯಾಲಯಕ್ಕೆ ಅಹವಾಲು ಸಲ್ಲಿಸಿದ್ದರು. ಹಾಗಾಗಿ, ಗುತ್ತಿಗೆ ಅವಧಿಯು 1974ರಿಂದ 1994ರ ನಡುವೆ ಮಾತ್ರ ಇತ್ತೆಂದು ಅವರು ಸರಿಯಾಗಿಯೇ ಅರ್ಥ ಮಾಡಿಕೊಂಡಿದ್ದಾರೆಂದು ಇದನ್ನು ಅರ್ಥೈಸಿಕೊಳ್ಳಬೇಕು ಎಂದು ಪ್ರತ್ಯರ್ಜಿದಾರ ಪರವಾಗಿ ವಾದಿಸಲಾಗಿದೆ. ನಾವು ಈ ವಾದವನ್ನು ಸಹ ಆಲಿಸಿದೆವು. 2009ರ ರಿಟ್ ಅರ್ಜಿ ಸಂಖ್ಯೆ 562ರಲ್ಲಿ, ಭಾರತದ ಸರ್ವೋಚ್ಚ ನ್ಯಾಯಾಲಯವು, ಅಗತ್ಯ ಪರವಾನಗಿಗಳಿಲ್ಲದೆ ಅಥವಾ ಗಣಿ ಗುತ್ತಿಗೆಯೂ ಇಲ್ಲದೆ 'ಸಿ' ಪ್ರವರ್ಗದ ಹಲವಾರು ಗಣಿಗಳನ್ನು ನಿರ್ವಹಿಸಲಾಗುತ್ತಿರುವ ಅಂಶವನ್ನು ಈ ಕೆಳಗಿನಂತೆ ದಾಖಲಿಸಿ ಗಮನಕ್ಕೆ ತೆಗೆದುಕೊಳ್ಳಲಾಗಿದೆ:

*"44. ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಕೈಗೊಳ್ಳಲಾದಂಥ ಅಕ್ರಮ ಗಣಿಗಾರಿಕೆಯ ನಿಖರ ವ್ಯಾಪ್ತಿಯನ್ನು ಈ ಆದೇಶದ ಹಿಂದಿನ ಕಂಡಿಕೆಯಲ್ಲಿ (ಕಂಡಿಕೆ 23) ವಿವರವಾಗಿ ಗಮನಿಸಲಾಗಿದೆ. ಆದುದರಿಂದ, ಅದನ್ನು ಇಲ್ಲಿ ಪುನರಾವರ್ತಿಸುವ ಅಗತ್ಯವಿಲ್ಲ. ಅಕ್ರಮ ಗಣಿಗಾರಿಕೆಯು ರಾಷ್ಟ್ರದ ಆರ್ಥಿಕತೆಯ ಮೇಲೆ ವ್ಯಾಪಕ ಹಾನಿ ಉಂಟು ಮಾಡುವುದಲ್ಲದೆ, ವಾಸ್ತವದಲ್ಲಿ, ಜಾರಿಯಲ್ಲಿರುವ ಕಾನೂನುಗಳ ಮೂಲಕ ನಿಯಂತ್ರಿಸುವ ವ್ಯವಸ್ಥೆಯ ವಿಶ್ವಾಸಾರ್ಹತೆಯ ಮೇಲೆ ವಿಪತ್ತುಕಾರಿ ತೊಂದರೆಯನ್ನುಂಟು ಮಾಡುತ್ತದೆ. ಜೀವಿಪರಿಸರ ಮತ್ತು ವಾತಾವರಣದ ಮೇಲೆ ವಿನಾಶಕ ಮತ್ತು ವಿಧ್ವಂಸಕ ಪರಿಣಾಮವನ್ನುಂಟು ಮಾಡುತ್ತದೆ. 'ಸಿ' ಪ್ರವರ್ಗದ ಹಲವಾರು ಗಣಿಗಳು ಅರಣ್ಯ ಸಂರಕ್ಷಣಾ ಅಧಿನಿಯಮದ ಮೇರೆಗೆ ಅಗತ್ಯ ಪರವಾನಗಿಗಳಿಲ್ಲದೆ ಅಥವಾ ಗಣಿ ಕಾರ್ಯಚಟುವಟಿಕೆಗಳಿಗೆ ಬಳಸಲಾಗುತ್ತಿರುವ ಪ್ರದೇಶದ ಭಾಗಗಳಿಗೆ ಸಂಬಂಧಿಸಿದ ಗಣಿ ಗುತ್ತಿಗೆ ಇಲ್ಲದೆಯೇ ಕಾರ್ಯನಿರ್ವಹಿಸುತ್ತಿವೆ ಎಂದು ಸಿಇಸಿ ಇವರು ನ್ಯಾಯಾಲಯಕ್ಕೆ ಸಲ್ಲಿಸಿದ ಸಂಕಲನದಿಂದ ರುಜುವಾತಾಗಿದೆ. ಪರಿಸರಕ್ಕಾಗುವ ಹಾನಿ ಮತ್ತು ವಿನಾಶಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ಇರಿಸಲಾದ ಉಪಗ್ರಹ ಚಿತ್ರಣಗಳು ನ್ಯಾಯಿಕ ಆತ್ಮಸಾಕ್ಷಿಗೆ ಆಘಾತವನ್ನುಂಟು ಮಾಡಿವೆ. ಮೇಲಿನ ಅಂಶಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಅತ್ಯಂತ ಗರಿಷ್ಠ ಮಟ್ಟದಲ್ಲಿ ಕಾನೂನು ಉಲ್ಲಂಘಿಸಿದವರ/ಮಾಲಿನ್ಯ ಉಂಟು ಮಾಡಿದವರ ಎಂದರೆ 'ಸಿ' ಪ್ರವರ್ಗದ ಗಣಿಗಳ ಸಂಬಂಧದಲ್ಲಿ ಮುಂದಿನ*

*ಕ್ರಮವನ್ನು ಕುರಿತು ತೀರ್ಪು ನೀಡಬೇಕಿದೆ. ಹಾಗೆ ಮಾಡುವಾಗ, ತಯಾರಿಸಿದ ಉಕ್ಕು ಮತ್ತು ಇತರ ತತ್ಸಂಬಂಧಿ ಉತ್ಪನ್ನಗಳ ಸಾಕಷ್ಟು ಪೂರೈಕೆಯನ್ನು ಸುನಿಶ್ಚಿತಗೊಳಿಸಲು ಕಬ್ಬಿಣದ ಅದಿರಿನ ಅಗತ್ಯತೆಯನ್ನು ಸಹ ನ್ಯಾಯಾಲಯವು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ."*

(ಒತ್ತು ನೀಡಲಾಗಿದೆ)

22. ಆದ್ದರಿಂದ, ಗಣಿ ಅವಧಿಯು 1974ರಿಂದ 1994ನೇ ನಡುವಣ ಅವಧಿಯಾಗಿತ್ತೆಂದು ರಾಜ್ಯದ ಪರವಾಗಿ ಮಂಡಿಸಿದ ವಾದವನ್ನು ಒಪ್ಪಿಕೊಳ್ಳಲಾಗಿದೆ ಎಂದಿಟ್ಟುಕೊಂಡಾಗ್ಯೂ, ಆಗ ಅರ್ಜಿದಾರರನ್ನು ಗಣಿ ಗುತ್ತಿಗೆಯು ಇಲ್ಲದಿರುವ ಕಿರು ನಿರ್ವಾಹಕರೆಂದು ವರ್ಗೀಕರಿಸಬೇಕಾಗುತ್ತದೆ. ಅಂಥ ಒಂದು ಸಂಭವನೀಯತೆಯನ್ನು ಮತ್ತು 'ಸಿ' ಪ್ರವರ್ಗದ ಗಣಿಗಳಿಗೆ ಸಂಬಂಧಿಸಿದಂತೆ 03ನೇ ಫೆಬ್ರವರಿ 2012ರ ಸಿಇಸಿಯವರ ವರದಿಯ ಕಂಡಿಕೆ ಸಂಖ್ಯೆ VI ಮತ್ತು VIIರಲ್ಲಿ ಇರುವ ಶಿಫಾರಸ್ಸುಗಳನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ಪರ್ಯಾಲೋಚಿಸಿದೆ. ನಿರ್ದೇಶನಗಳ ಸುಸಂಗತ ಭಾಗವನ್ನು ಈ ಮುಂದಿನಂತೆ ಓದಲಾಗಿದೆ:

*"(7) ದಿನಾಂಕ 3.2.2012ರ ಸಿಇಸಿ ವರದಿಯ VI ಮತ್ತು VII ಕಂಡಿಕೆಗಳಲ್ಲಿ (ಪುಟ ಸಂಖ್ಯೆ 56 ಮತ್ತು 57) ಇರುವ ಶಿಫಾರಸ್ಸುಗಳನ್ನು ಒಪ್ಪಲಾಗಿದೆ, ಅದರರ್ಥ, 'ಸಿ' ಪ್ರವರ್ಗದ ಗಣಿಗಳ ಸಂಬಂಧದಲ್ಲಿನ ಗುತ್ತಿಗೆಗಳು ರದ್ದಾಗುತ್ತವೆ ಮತ್ತು ಹೊಸ ಗುತ್ತಿಗೆಗಳನ್ನು ಮಂಜೂರು ಮಾಡುವ ಸಂಬಂಧದಲ್ಲಿನ ದಿನಾಂಕ 3.2.2012ರ ಸಿಇಸಿ ವರದಿಯ (VII ಕಂಡಿಕೆ ಪುಟ ಸಂಖ್ಯೆ 56) ಶಿಫಾರಸ್ಸುಗಳನ್ನು ಒಪ್ಪಲಾಗಿದೆ".*

23. ಭಾರತ ಸರ್ವೋಚ್ಚ ನ್ಯಾಯಾಲಯವು ಉಲ್ಲೇಖಿಸಿದ (VI ಮತ್ತು VII) ಶೀಫಾರಸ್ಸುಗಳನ್ನು ಈ ಮುಂದಿನಂತೆ ಓದಲಾಗಿದೆ:

> (VI) 'ಪ್ರವರ್ಗ–ಸಿ' ಯಲ್ಲಿ ಬರುವ ಗಣಿ ಗುತ್ತಿಗೆಗಳ (ವಿವರಗಳನ್ನು ಈ ವರದಿಗೆ ಲಗತ್ತಿಸಿದ ಅನುಬಂಧ ಆರ್ 11ರಲ್ಲಿ ನೀಡಲಾಗಿದೆ) ಸಂಬಂಧದಲ್ಲಿ, (ಎ) ಮಂಜೂರಾದ ಗುತ್ತಿಗೆ ಪ್ರದೇಶದ ಹೊರಗೆ ಗಣನೀಯ ಪ್ರಮಾಣದಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರಬೇಕೆಂದು ಕಂಡುಬಂದ ಕಾರಣದಿಂದ ಈ ಗುತ್ತಿಗೆಗಳನ್ನು ರದ್ದುಗೊಳಿಸಬೇಕೆಂದು/ ಆ ಕುರಿತು ನಿರ್ಧರಿಸಬೇಕೆಂದು ಅಂಥ ಗುತ್ತಿಗೆಗಳ ಸಂಬಂಧದಲ್ಲಿ ನಿರ್ದೇಶಿಸಬೇಕು; (ಬಿ) ಈ ಗುತ್ತಿಗೆಯ ಕಬ್ಬಿಣದ ಅದಿರಿನ ಪ್ರಸ್ತುತ ಸಂಗ್ರಹದ ಇದೇ ಮಾರಾಟ ಪ್ರಕ್ರಿಯೆಯನ್ನು ಮೇಲ್ವಿಚಾರಣಾ ಸಮಿತಿಯು ತಡೆಹಿಡಿದಿಟ್ಟುಕೊಳ್ಳಬೇಕು ಹಾಗೂ (ಸಿ) ಆರ್ ಮತ್ತು ಆರ್ ಯೋಜನೆಯ ಅನುಷ್ಠಾನವು ಗುತ್ತಿಗೆದಾರನ ವೆಚ್ಚದಲ್ಲಿ ನಡೆಯಬೇಕು ಎಂದು ಶಿಫಾರಸ್ಸು ಮಾಡಲಾಗಿದೆ.
>
> (VII) 'ಪ್ರವರ್ಗ–ಸಿ' ಯಲ್ಲಿ ಬರುವ ಗಣಿ ಗುತ್ತಿಗೆ ಪ್ರದೇಶವನ್ನು ಗಣಿ ಗುತ್ತಿಗೆಗಳನ್ನು ರದ್ದುಗೊಳಿಸಿದ ನಂತರ ಪಾರದರ್ಶಕ ಬಿಡ್ಡಿಂಗ್ ಪ್ರಕ್ರಿಯೆ ಮೂಲಕ ಅಂತಿಮ ಬಳಕೆದಾರರ ಪೈಕಿಯಿಂದ ಅತ್ಯಂತ ಹೆಚ್ಚು ಬಿಡ್ ಮಾಡುವ ಬಿಡ್‌ದಾರನಿಗೆ ಹಂಚಿಕೆ ಮಾಡಬೇಕೆಂದು ನಿರ್ದೇಶಿಸಬಹುದು. ಒಪ್ಪಂದ ಅವಧಿಯ ಕಾಲಾವಧಿಯಲ್ಲಿ ಕಬ್ಬಿಣದ ಅದಿರಿನ ಅನುಮತಿಸಬಹುದಾದ ವಾರ್ಷಿಕ ಉತ್ಪಾದನೆಯ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ

> ಈ ಉದ್ದೇಶಕ್ಕಾಗಿ ಕನಿಷ್ಠ ದರವನ್ನು ನಿಗದಿಪಡಿಸಬೇಕು. ಅಂಥ ಗಣಿಗಳಿಂದ ಉತ್ಪಾದಿಸಲಾಗುವ ಕಬ್ಬಿಣದ ಅದಿರನ್ನು ನಿರ್ಬಂಧಿತ ಉದ್ದೇಶಕ್ಕೆ ಮಾತ್ರ ಬಳಸಬೇಕೆ ಹೊರತು, ಯಾವುದೇ ಮಾರಾಟಕ್ಕೆ ಅವಕಾಶವಿರುವುದಿಲ್ಲ. ಈ ಸಂಬಂಧದಲ್ಲಿ ಸವಿವರವಾದ ಸ್ಕೀಂಗಳನ್ನು ಸಿದ್ಧಪಡಿಸಿ, ಈ ಮಾನ್ಯ ನ್ಯಾಯಾಲಯದ ಅನುಮತಿ ಪಡೆದುಕೊಂಡ ನಂತರ ಅನುಷ್ಠಾನಗೊಳಿಸಬೇಕು".

ಮೇಲಿನ ಉಲ್ಲೇಖದ ಎಚ್ಚರಿಕೆಯ ಪರಿಶೀಲನೆಯಿಂದ, ಸಿಇಸಿ ಶಿಫಾರಸ್ಸುಗಳು ಪ್ರಶ್ನಿತ ಆದೇಶದ ಮೂಲಕ ರಾಜ್ಯವು ಪ್ರಯತ್ನಿಸಿದ ಖನಿಜಗಳ ವೆಚ್ಚ ವಸೂಲಿಯನ್ನು ಒಳಗೊಂಡಿರುವುದಿಲ್ಲ ಎಂಬುದು ಕಂಡುಬರುತ್ತದೆ.

24. ಅಲ್ಲದೆ, ಪ್ರತ್ಯರ್ಜಿದಾರರ ವಾದವು, ಸಮರ್ಥವಾಗಿ ಈ ತರ್ಕವನ್ನು ಸೋಲಿಸುತ್ತದೆ. ಅರ್ಜಿದಾರರ ಗುತ್ತಿಗೆಯು 18ನೇ ಏಪ್ರಿಲ್ 2013ರಂದು ಇದ್ದಂತೆ ಜಾರಿಯಲ್ಲಿದಿದ್ದರೆ, ಸದರಿ ಗುತ್ತಿಗೆಯನ್ನು ರದ್ದುಗೊಳಿಸುವ ಭಾರತದ ಸರ್ವೋಚ್ಚ ನ್ಯಾಯಾಲಯದ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಹಾಗೆಯೇ, ಅರ್ಜಿದಾರರ ಗುತ್ತಿಗೆಯು 12ನೇ ಸೆಪ್ಟೆಂಬರ್, 2013ರಂದು ಇದ್ದಂತೆ ಜಾರಿಯಲ್ಲಿದ್ದಿದ್ದರೆ, ರಾಜ್ಯ ಸರ್ಕಾರವು ಸದರಿ ಗುತ್ತಿಗೆಯನ್ನು ರದ್ದುಗೊಳಿಸುವ ಪ್ರಶ್ನೆಯೂ ಸಹ ಉದ್ಭವಿಸುತ್ತಿರಲಿಲ್ಲ.

25. ಗಣಿ ಮತ್ತು ಭೂ ವಿಜ್ಞಾನಗಳ ಪ್ರಶ್ನಿತ ಆದೇಶವು ಸಮನ್ಯಾಯ ಸ್ವರೂಪದ್ದಾಗಿದೆ. ಒಂದೆಡೆ ಭಾರತ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳಿಗನುಗುಣವಾಗಿ, ರಾಜ್ಯ ಸರ್ಕಾರವು ಅರ್ಜಿದಾರರ ಗುತ್ತಿಗೆಯನ್ನು ಒಳಗೊಂಡು 51 ಗುತ್ತಿಗೆಗಳನ್ನು ರದ್ದುಗೊಳಿಸಿದೆ ಎಂದು ಅದು ಹೇಳಿದೆ. ಗುತ್ತಿಗೆಯು 12ನೇ ಸೆಪ್ಟೆಂಬರ್, 2013ರಂದು ಜಾರಿಯಲ್ಲಿತ್ತು ಮತ್ತು ಆ ದಿನಾಂಕದಂದು ಪ್ರತ್ಯರ್ಜಿದಾರರು ಗುತ್ತಿಗೆಯನ್ನು ರದ್ದುಗೊಳಿಸಿರುವರು ಎಂಬ

ಪ್ರತ್ಯರ್ಜಿದಾರರ ತಿಳುವಳಿಕೆಯು ಸಂದೇಹಕ್ಕೆಡೆ ಮಾಡಿದಂತಿತ್ತು ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ. ಇನ್ನೊಂದು ಕಡೆ ಅದು, ಗುತ್ತಿಗೆ ಪತ್ರದಲ್ಲಿ ಲಿಪಿಕ ತಪ್ಪು ಉಂಟಾಗಿತ್ತೆಂದು ಮತ್ತು ಅದರಲ್ಲಿ ಹೇಳಲಾದ ಗುತ್ತಿಗೆ ಪ್ರಾರಂಭದ ದಿನಾಂಕವನ್ನು 5ನೇ ಜುಲೈ 1974ರ ಬದಲಾಗಿ 27ನೇ ಏಪ್ರಿಲ್ 2002 ಎಂಬುದಾಗಿ ಪ್ರಮಾದವಶಾತ್ ತೋರಿಸಲಾಗಿತ್ತೆಂದು ಹೇಳುತ್ತದೆ. ಇದನ್ನು ಒಪ್ಪಿಕೊಂಡಲ್ಲಿ, ಆಗ, ಅಕ್ರಮವಾಗಿ ಗಣಿಗಾರಿಕೆ ನಡೆಸಲಾಗುತ್ತಿದೆ ಎಂದು ಆರೋಪಿಸಲಾದ ಕಾಲಾವಧಿಯಾದ 2003–2008ರ ಕಾಲಾವಧಿಯಲ್ಲಿ ಗುತ್ತಿಗೆಯು ಅಸ್ತಿತ್ವದಲ್ಲೇ ಇರಲಿಲ್ಲ. ಆದರೆ, ಪ್ರಶ್ನಿತ ಆದೇಶದಲ್ಲಿನ ಪ್ರಸ್ತಾವನೆಯು, ಅರ್ಜಿದಾರರ ಗುತ್ತಿಗೆಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳಿಗೆ ಅನುಸಾರವಾಗಿ ರದ್ದುಗೊಳಿಸಲಾಗಿತ್ತು ಎಂಬ ತದ್ವಿರುದ್ಧವಾದ ಒಕ್ಕಣೆಯನ್ನು ಒಳಗೊಂಡಿದೆ. ಈ ಎರಡೂ ನಿಲುವುಗಳು ಒಂದಕ್ಕೊಂದು ತದ್ವಿರುದ್ಧವಾಗಿವೆ ಮತ್ತು ಪರಸ್ಪರ ವಿರೋಧಾಭಾಸದಿಂದ ಕೂಡಿವೆಯಾದ್ದರಿಂದ ಒಟ್ಟಿಗೆ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಪ್ರತ್ಯರ್ಜಿದಾರರ ನಿಲುವು ಸಂಪೂರ್ಣವಾಗಿ ಗ್ರಾಹ್ಯವಲ್ಲದ ನಿಲುವಾಗಿದೆ ಎಂದು ಹೇಳಲು ಇದು ಪರ್ಯಾಪ್ತವಾಗಿದೆ.

26. ನಿಸ್ಸಂಶಯವಾಗಿ, ಪ್ರಶ್ನಿತ ಆದೇಶವು, ಲೋಕಾಯುಕ್ತವು ಮಾಡಿದ ಶಿಫಾರಸ್ಸುಗಳಿಂದ ಹೊರಗುಳಿಯುತ್ತದೆ. 2013ರ ಐ.ಎ.ಸಂಖ್ಯೆ: 185ರಲ್ಲಿ, ಅರ್ಜಿದಾರರು ರಿಟ್ ಅರ್ಜಿ ಸಂಖ್ಯೆ: 512/2013ರಲ್ಲಿನ ದಿನಾಂಕ 18ನೇ ಡಿಸೆಂಬರ್ 2008 ಮತ್ತು 27ನೇ ಜುಲೈ 2011ರ ಲೋಕಾಯುಕ್ತದ ಎರಡು ವರದಿಗಳಲ್ಲಿ ಇರುವ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವುದಕ್ಕೆ ಕೋರಿದ್ದರು. ಸದರಿ ಅರ್ಜಿಯನ್ನು ಪುರಸ್ಕರಿಸಿರಲಿಲ್ಲ. ಆದರೆ ಪರಿಷ್ಕೃತ ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಪರಿಷ್ಕೃತ ಅರ್ಜಿಯನ್ನು ಸಲ್ಲಿಸಲಾಗಿತ್ತು ಮತ್ತು ಅದು 29ನೇ ಜುಲೈ 2015ರ ಆದೇಶದ ಮೂಲಕ ವಜಾಗೊಂಡಿತ್ತು. ಯಾರು ಗುತ್ತಿಗೆದಾರರಾಗಿದ್ದರೋ ಮತ್ತು ಯಾರ ಗುತ್ತಿಗೆಗಳನ್ನು ಗುತ್ತಿಗೆ ಅವಧಿವರೆಗೆ ಅವರು ಹೊರತೆಗೆದ ಕಬ್ಬಿಣದ ಅದಿರಿನ ಮಾರುಕಟ್ಟೆ ಮೌಲ್ಯ ಸಹಿತವಾಗಿ

ರದ್ದುಗೊಳಿಸಲಾಯಿತೋ, ಆ ವ್ಯಕ್ತಿಗಳನ್ನು ಜವಾಬ್ದಾರರನ್ನಾಗಿಸುವುದು ಅಗತ್ಯವೆಂದು ಭಾರತದ ಸರ್ವೋಚ್ಚ ನ್ಯಾಯಾಲಯವು ಭಾವಿಸದೇ ಇದ್ದಾಗ, ನಿಶ್ಚಯವಾಗಿಯೂ ಗಣಿ ಮತ್ತು ಭೂ ವಿಜ್ಞಾನಗಳ ನಿರ್ದೇಶಕರಿಗೆ ಹಾಗೆ ಮಾಡಲು ಅನುಮತಿ ಇರಲಿಲ್ಲ.

27. ಆದುದರಿಂದ, ಲೋಕಾಯುಕ್ತವು ಯಾರೇ ಖಾಸಗಿ ವ್ಯಕ್ತಿಯ ವಿರುದ್ಧ ಯಾವುದೇ ಅಧಿಕಾರ ವ್ಯಾಪ್ತಿ ಹೊಂದಿರದೇ ಇರುವುದರಿಂದ ಹಾಗೂ ಲೋಕಾಯುಕ್ತವು ನಿರ್ಧರಿಸಿದ ಮೌಲ್ಯಕ್ಕೆ ಅರ್ಜಿದಾರರನ್ನು ಜವಾಬ್ದಾರರನ್ನಾಗಿಸಲು ಮಾಡಿದ ಮನವಿಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ತಿರಸ್ಕರಿಸಿರುವುದರಿಂದ, ಕ್ಲೇಮು ಮಾಡಲಾದ ಮೊತ್ತಕ್ಕೆ ಲೋಕಾಯುಕ್ತದ ವರದಿಯು ಆಧಾರವಾಗಲು ಸಾಧ್ಯವಿಲ್ಲ.

28. ಪ್ರಾಸಂಗಿಕವಾಗಿ, ಕಬ್ಬಿಣದ ಅದಿರಿನ ಮೌಲ್ಯವನ್ನು ಏಕಪಕ್ಷೀಯವಾಗಿ ಲೆಕ್ಕ ಹಾಕುವುದು ಮತ್ತು ಸಂಗ್ರಹಿಸುವುದು ರಾಜ್ಯದ ಹಕ್ಕು ಎಂಬುದು ಮತ್ತೊಂದು ಅಂಶವಾಗಿದೆ. ರಾಜ್ಯವು ಅರ್ಜಿದಾರನಿಗೆ ಗಣಿಯನ್ನು ಗುತ್ತಿಗೆಗೆ ನೀಡಿದೆ. ಅದಕ್ಕನುಗುಣವಾಗಿ, ತನಗೆ ಉಂಟಾದ ನಷ್ಟವನ್ನು ಅದು ನಿರ್ಧರಿಸಿದೆ ಹಾಗೂ ಅದನ್ನು ವಸೂಲು ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ. ***ಕರ್ನಾಟಕ ರಾಜ್ಯ –ವಿರುದ್ಧ– ಶ್ರೀ ರಾಮೇಶ್ವರ ರೈಸ್ ಮಿಲ್ಸ್, ತೀರ್ಥಹಳ್ಳಿ***[2] ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ರಾಜ್ಯವು ಖಾಸಗಿ ವ್ಯಕ್ತಿಯೊಂದಿಗೆ ಮಾಡಿಕೊಂಡ ಒಪ್ಪಂದದ ಮೇರೆಗೆ, ಷರತ್ತುಗಳ ಉಲ್ಲಂಘನೆಯಿಂದಾಗಿ ಉಂಟಾದ ನಷ್ಟಗಳನ್ನು ಲೆಕ್ಕ ಹಾಕುವ ಮತ್ತು ಉಂಟಾದ ನಷ್ಟಗಳನ್ನು ವಸೂಲಿ ಮಾಡಿಕೊಳ್ಳುವ ಅಧಿಕಾರವು, ಅದು, ಉಲ್ಲಂಘನೆಯನ್ನು ಒಪ್ಪಿಕೊಂಡಿರುವಂಥ ಮೊಕದ್ದಮೆಗಳಿಗೆ ಮಾತ್ರ ಸೀಮಿತವಾಗಿದೆಯೇ ಹೊರತು ವಿವಾದಕ್ಕೊಳಗಾದ ಮೊಕದ್ದಮೆಗಳಿಗೆ ಅಲ್ಲವೆಂದು ತೀರ್ಪು ನೀಡಿದೆ. ಕರಾರು ಮಾಡಿಕೊಂಡ ಪಕ್ಷವು (ಪಕ್ಷಕಾರರು) ಯಾವುದೇ ಷರತ್ತುಗಳ ಉಲ್ಲಂಘನೆಯನ್ನು ಮಾಡಿದ್ದನ್ನು ವಿವಾದಗೊಳಿಸಿರುವಲ್ಲಿ,

2. 1987(2) ಎಸ್‌ಸಿಸಿ 160

ನ್ಯಾಯನಿರ್ಣಯವನ್ನು ಒಂದು ಸ್ವತಂತ್ರ ಪ್ರಾಧಿಕಾರವು ಮಾಡಬೇಕೇ ಹೊರತು, ಕರಾರು ಮಾಡಿಕೊಂಡ ಇತರ ಪಕ್ಷ (ಪಕ್ಷಕಾರ)ವಲ್ಲ ಎಂಬುದು ನ್ಯಾಯದ ಮತ್ತು ಸಮನ್ಯಾಯದ ಹಿತದೃಷ್ಟಿಯಿಂದ ಅಗತ್ಯವಾಗಿದೆ. ಆದ್ದರಿಂದ, ಕರಾರಿನ ಉಲ್ಲಂಘನೆಗೆ ಸಂಬಂಧಿಸಿದಂತೆ ವಿವಾದ ಉಂಟಾದಾಗ, ಒಪ್ಪಂದಕ್ಕೊಳಗಾದ ಪಕ್ಷವು (ಪಕ್ಷಕಾರರು) ತನ್ನ ಸ್ವಂತ ಮೊಕದ್ದಮೆಯಲ್ಲಿ ಮಧ್ಯಸ್ಥಗಾರನಾಗಲು ಸಾಧ್ಯವಿಲ್ಲ. ***ಜಯಣ್ಣ ಮತ್ತು ಸಹೋದರರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***[3] ಈ ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ಕ್ಲೇಮನ್ನು ಕುರಿತು ಸಕ್ಷಮ ಸಿವಿಲ್ ನ್ಯಾಯಾಲಯ ಮಾತ್ರ ನಿರ್ಣಯಿಸಬಹುದೇ ಹೊರತು, ರಾಜ್ಯಕ್ಕಾಗಿ ಮತ್ತು ರಾಜ್ಯದ ಪರವಾಗಿ ಕ್ಲೇಮನ್ನು ನಿರ್ಣಯಿಸಿದ ಪ್ರಾಧಿಕಾರವಲ್ಲ ಎಂದು ಇಂತಹುದೇ ಪ್ರಕರಣದಲ್ಲಿ ತೀರ್ಮ ನೀಡಿದೆ.

29. ನ್ಯಾಯಯುತವಾದ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಮತ್ತು ವ್ಯವಹರಿಸುವುದು ಸರ್ಕಾರದ ಕರ್ತವ್ಯವಾಗಿದೆ. ರಾಜ್ಯ ಸರ್ಕಾರವು, ಭಾರತ ಸರ್ವೋಚ್ಚ ನ್ಯಾಯಾಲಯದ ಮುಂದೆ ಪಕ್ಷಕಾರನಾಗಿದೆ. ಆದುದರಿಂದ, ಯಾವುದೇ ಹೆಸರಿನಿಂದ ಕರೆಯಲಿ ಯಾವುದೇ ಮೊತ್ತವನ್ನು ಸಂಗ್ರಹಿಸಲು ಲೋಕಾಯುಕ್ತವು ಸಲ್ಲಿಸಿದ ವರದಿಯನ್ನಾಶ್ರಯಿಸುವುದರಿಂದ ಅವರು ವಿಬಂಧಿತರಾಗಿರತಕ್ಕದ್ದು. ಮೇಲೆ ಉಲ್ಲೇಖಿಸಿದ ನೋಟೀಸನ್ನು ಹೊರಡಿಸುವ ಮುಂಚೆ ಅದರ ಸಾಧಕಬಾಧಕಗಳನ್ನು ಕುರಿತು ಆಲೋಚಿಸುವ ಕರ್ತವ್ಯವನ್ನು ಸರ್ಕಾರಿ ಆಡಳಿತ ಯಂತ್ರವು ಹೊಂದಿದೆ. ವ್ಯಕ್ತಿಗಳಿಗಾಗುವ ಕಿರುಕುಳವನ್ನು ತಪ್ಪಿಸಲು ರಾಜ್ಯ ಆಡಳಿತ ಯಂತ್ರವು ಸೂಕ್ತವಾಗಿ ಕಾರ್ಯನಿರ್ವಹಿಸಬೇಕು.

30. ಯಾವುದೇ ದೃಷ್ಟಿಯಿಂದ ನೋಡಿದರೂ, ಪ್ರಶ್ನಿತ ಆದೇಶವು, ಐ.ಎ. ಸಂಖ್ಯೆ 140, ಐ.ಎ. ಸಂಖ್ಯೆ 2009ರ 562ರಲ್ಲಿನ ಪರಿಷ್ಕೃತ ಅರ್ಜಿಯಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಆದೇಶದಲ್ಲಿ ಅಂಥ ಕ್ಲೇಮುಗಳನ್ನು

3. 1986(2) ಕೆಎಲ್‌ಜೆ 143

ಅದು ತಿರಸ್ಕರಿಸಿದೆ ಎಂಬ ಅಂಶವನ್ನು ವಿಶೇಷವಾಗಿ ಗಮನಕ್ಕೆ ತೆಗೆದುಕೊಂಡಲ್ಲಿ, ಸಮರ್ಥನೀಯವಾಗಿರುವುದಿಲ್ಲ.

31. ಮೇಲಿನ ನಮ್ಮ ಚರ್ಚೆಗಳ ಹಿನ್ನೆಲೆಯಲ್ಲಿ, ರಿಟ್ ಅರ್ಜಿಯನ್ನು ಅಂಗೀಕರಿಸುವ ಮೂಲಕ, ರಿಟ್ ಅರ್ಜಿಯೊಂದಿಗೆ ಅನುಬಂಧ–ಟಿ ಆಗಿ ಲಗತ್ತಿಸಿದ ಪ್ರತ್ಯರ್ಜಿದಾರ 2 ಇವರು ಹೊರಡಿಸಿದ ದಿನಾಂಕ 2ನೇ ನವೆಂಬರ್, 2016ರ 28ನೇ ನವೆಂಬರ್ 2016ರ ಆದೇಶಗಳನ್ನು ರದ್ದುಗೊಳಿಸಿದ್ದೇವೆ.

32. ರಿಟ್ ಅರ್ಜಿಯನ್ನು ವಿಲೆ ಮಾಡುವ ದೃಷ್ಟಿಯಿಂದ, ಇತ್ಯರ್ಥದಲ್ಲಿರುವ ವಾದಕಾಲೀನ ಅರ್ಜಿಗಳು ಸಹಾ ಪರಿಗಣನೆಗಾಗಿ ಊರ್ಜಿತವಾಗಿರುವುದಿಲ್ಲ ಮತ್ತು ಅವುಗಳನ್ನು ಸಹ ವಿಲೇ ಮಾಡಲಾಗಿದೆ.

33. ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶವನ್ನು ನಾವು ಮಾಡಿರುವುದಿಲ್ಲ.